9

# "ಈಗ ನಾವೇನು ಮಾಡಬೇಕು?"

## (ಯೋಹಾನ 15)

*"ತಂದೆ ನನ್ನನ್ನು ಪ್ರೀತಿಸಿದ ಹಾಗೆಯೇ ನಾನೂ ನಿಮ್ಮನ್ನು ಪ್ರೀತಿಸಿದ್ದೇನೆ; ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ನಾನು ನನ್ನ ತಂದೆಯ ಆಜ್ಞೆಗಳನ್ನು ಕೈ ಕೊಂಡು ನಡೆದು ಆತನ ಪ್ರೀತಿ ಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ ... ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿ ಗಿಂತ ಹೆಚ್ಚಿನ ಪ್ರೀತಿ ಯು ಯಾವದೂ ಇಲ್ಲ. ನಾನು ನಿಮಗೆ ಕೊಟ್ಟ ಆಜ್ಞೆಗಳಿಗೆ ಸರಿಯಾಗಿ ನೀವು ನಡೆದರೆ ನೀವು ನನ್ನ ಸ್ನೇಹಿತರು ... ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂತಲೇ ಇವುಗಳನ್ನು ನಿಮಗೆ ಆಜ್ಞಾಪಿಸುತ್ತೇನೆ" (ವಚನಗಳು 9-17).*

ಒಂದು ಸಂದಿಗ್ಧ ಪರಿಸ್ಥಿತಿ ಉಂಟಾಗುವಾಗ - ನಿಮ್ಮ ಪ್ರೀತಿ ಪಾತ್ರರು ನೀಡಿರುವ ಮಾರ್ಗದರ್ಶನವನ್ನು ತೊರೆಯುವ ಸಂದರ್ಭ ಉಂಟಾದಾಗ ನೀನು ಬಿಟ್ಟು ಹೋಗುವ ಜನರು ಆ ಪರಿಸ್ಥಿತಿಯಲ್ಲಿ ಯಾವ ವಿಧವಾಗಿ ವರ್ತಿಸಬೇಕು. ಅಂಥವರಿಗೆ ಯಾವ ವಿಧವಾದ ಸಲಹೆಯನ್ನು ನೀಡುವಿರಿ? ಈ ಸಂದಿಗ್ಧ ಪರಿಸ್ಥಿತಿಯನ್ನು ಅವರುಗಳು ಎದುರಿಸುವಂತೆ ಯಾವ ಸಹಾಯವನ್ನು ನೀವು ನೀಡುವಿರಿ?

ಮೇಲುಪ್ಪರಿಗೆಯ ಗುರುವಾರ ರಾತ್ರಿಯಲ್ಲಿ, ಯೇಸು ತನ್ನನ್ನು ಹಿಡಿಯಲ್ಪಡುವ ಸಂದರ್ಭವನ್ನು ಯಾವ ರೀತಿಯಲ್ಲಿ ಎದುರಿಸಬೇಕು, ಮರುದಿನ ಮುಂಜಾನೆಯಲ್ಲಿ ಆತನಿಗಾಗುವ ವಿಚಾರಣಾ ಸಂದರ್ಭವನ್ನು ನಂತರ ಶುಕ್ರವಾರ ಮಧ್ಯಾಹ್ನ ಆತನಿಗಾಗುವ ಕ್ರೂಜೆಯ ಮರಣದ ಸಂದರ್ಭವನ್ನು ಹೇಗೆ ಎದುರಿಸಬೇಕೆಂಬ ಸಲಹೆಯನ್ನು ತನ್ನ ಅಪೊಸ್ತಲರಿಗೆ ನೀಡಿದನು. ಇದ್ದಕ್ಕಿದ್ದ ಹಾಗೆ ಅವರ ಮೇಲೆ ಆಪತ್ತು ಬರುವದಿತ್ತು. ಈ ಅಘಾತವು ಅವರನ್ನು ಕುಂದುವಂತೆ ಮಾಡುವದಿತ್ತು. ಅಂತಿಮವಾಗಿ, ಅವರು ತಮ್ಮ ನಾಯಕನು ಅವರನ್ನು ಬಿಟ್ಟು ತಂದೆಯ ಬಳಿಗೆ ಹೋದನು ಎಂಬುದನ್ನು ಗ್ರಹಿಸಿದಾಗ, ಅವರಲ್ಲಿದ್ದ ಏಕಾಂಗಿ ತನವು ಇನ್ನೂ ಕತ್ತಲಾಗುವ ಸಾಧ್ಯತೆಯಿತ್ತು. ತಮ್ಮ ಜೀವಿತದಲ್ಲಿ ಅವರು ಎಂದೂ ಇಂತಹ ಸಂದರ್ಭವನ್ನು ಎದುರಿಸಿರಲಿಲ್ಲ! ಅವರು ತಿಳಿದುಕೊಂಡಿದ್ದ ಪ್ರಪಂಚವು ಅವರನ್ನು ತಳಮಳಗೊಳಿಸಿತ್ತು. ಇಂತಹ ಸಮಯದಲ್ಲಿ ಯೇಸು ನೀಡಿದ ಸಲಹೆಯ ಯಾವ ಮಾತುಗಳು ಅವರನ್ನು ಸುರಕ್ಷಿತವಾಗಿಟ್ಟಿತ್ತು?

ಯೋಹಾನ 15:9-17ರಲ್ಲಿ, ಯೇಸು ತನ್ನ ಅಪೊಸ್ತಲರನ್ನು ಸುಗಮವಾಗಿ ನಡೆಸಿದನೆಂದು ಗಮನಿಸುತ್ತೇವೆ. ಅವರು ಮುರಿದು ಹೋದ ತಮ್ಮ ಪ್ರಂಪಂಚವನ್ನು ಪುನಃ ನಿರ್ಮಾಣಮಾಡಿಕೊಳ್ಳಲು ಯೇಸು ಅವರಿಗೆ ಸುರಕ್ಷಾ ಪೆಟ್ಟಿಗೆಯನ್ನು ನೀಡಿದ್ದನು.

### ಆತನ ಪ್ರೀತಿಯನ್ನು ನೆನಪು ಮಾಡಿಕೊಳ್ಳಿರಿ

*ಮೊದಲನೆಯದಾಗಿ, ಆತನ ಪ್ರೀತಿಯನ್ನು ಅವರು ನೆನಪು ಮಾಡಿಕೊಳ್ಳಬೇಕೆಂದು ಅವರನ್ನು ಬೇಡಿಕೊಂಡನು.* ಈ ಹಿಂದೆ ಆತನು, "ತಂದೆ ನನ್ನನ್ನು ಪ್ರೀತಿಸಿದ ಹಾಗೆಯೇ ನಾನೂ ನಿಮ್ಮನ್ನು ಪ್ರೀತಿಸಿದ್ದೇನೆ" (15:9). ಆತನ ಅಪ್ಪಣೆಯನ್ನು ಪಾಲಿಸುವ ಮುಖಾಂತರ ಅವರು ಆತನ ಪ್ರೀತಿಯಲ್ಲಿ ನೆಲೆಗೊಳ್ಳುವ ಸಾಧ್ಯತೆಯಿತ್ತು. ಆತನು ಮತ್ತು ತಿಳಿಸಿ, "ಪ್ರಾಣವನ್ನೇ

ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಯು ಯಾವುದೂ ಇಲ್ಲ" (15:13). ಆತನು ಅವರಿಗಾಗಿ ಪ್ರಾಣ ನೀಡುವದನ್ನು ನೋಡಿದ ನಂತರ, ಅದು ಆತನು ಅವರಿಗೆ ನೀಡಿದ ಉನ್ನತವಾದ ಬಹುಮಾನವಾಗಿತ್ತು.

## ಆತನ ಆಜ್ಞೆಗಳಿಗೆ ವಿಧೇಯರಾಗಿರಿ

*ಎರಡನೆಯದಾಗಿ, ಅವರು ಆತನ ಮಾತುಗಳಿಗೆ ವಿಧೇಯರಾಗಬೇಕು ಅಂದನು.* ವಿಧೇಯತೆಯು ಶಿಷ್ಯತ್ವದ ಹಾದಿಯಾಗಿದೆ. ಆತನು ತನ್ನ ಅನುಯಾಯಿಗಳನ್ನು ಪ್ರೀತಿಸಿದ್ದರಿಂದ, ಯೇಸು ಅವರಿಗೆ ಉತ್ತಮವಾದದ್ದನ್ನೇ ನೀಡಲು ಯೋಜಿಸಿದನು. "ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ" (15:10).

## ಅವರು ಆತನ ಸ್ನೇಹಿತರಾಗಬೇಕಿತ್ತು

*ಮೂರನೆಯದಾಗಿ, ಅವರು ಆತನ ಸ್ನೇಹಿತರಾಗಿದ್ದರು ಎಂಬುದನ್ನು ಅವರು ನೆನಪುಮಾಡಿಕೊಳ್ಳಬೇಕಿತ್ತು.* ಆತನು ತನ್ನ ಕೆಲಸದಲ್ಲಿ ಅವರನ್ನು ತನ್ನ ಸಹಭಾಗಿಗಳನ್ನಾಗಿ ಮಾಡಿಕೊಂಡಿದ್ದನು: "ನಾನು ನಿಮಗೆ ಕೊಟ್ಟ ಆಜ್ಞೆಗಳಿಗೆ ಸರಿಯಾಗಿ ನೀವು ನಡೆದರೆ ನೀವು ನನ್ನ ಸ್ನೇಹಿತರು" ನಾನು ನಿಮ್ಮನ್ನು ಆಳುಗಳನ್ನುವದಿಲ್ಲ ... ನಿಮ್ಮನ್ನು ಸ್ನೇಹಿತರೆಂದು ಹೇಳಿದ್ದೇನೆ, ತಂದೆಯ ಕಡೆಯಿಂದ ನಾನು ಕೇಳಿದ್ದನ್ನೆಲ್ಲಾ ನಿಮಗೆ ತಿಳಿಸಿದ್ದೇನೆ (15:14, 15). ಪ್ರಪಂಚದ ಕುರಿತಾಗಿ ತನ್ನಲ್ಲಿರುವ ಯೋಜನೆಯನ್ನು ದೇವರು ಯೇಸು ಕ್ರಿಸ್ತನಿಗೆ ತಿಳಿಸಿದ್ದನು. ಆದ್ದರಿಂದ ಈ ಯೋಜನೆಯನ್ನು ಯೇಸು ತನ್ನ ಅಪೊಸ್ತಲರಿಗೆ ಪ್ರಕಟಿಸಿದನು, ಮತ್ತು ತಾನು ಮಾಡಲಿರುವ ಕಾರ್ಯವನ್ನು ಮುಂದಾಗಿ ತಿಳಿಸಿದನು. ಈ ಯೋಜನೆಯ ನಿಮಿತ್ತವಾದ ಮಹಾ ಪ್ರತಿಫಲವನ್ನು ತೋರಲು ಆತನು ಸಿದ್ಧನಾಗಿದ್ದನು. ಅವರು ಆತನಿಗೆ ಸ್ನೇಹಿತರೂ, ಪಾಲುದಾರರೂ ಆಗಿದ್ದು ಆತನ ಅಪರಿಮಿತವಾದ ಯೋಜನೆಯಲ್ಲಿ ಸೇರಿಕೊಂಡಿದ್ದರು.

## ಫಲಕೊಡಬೇಕಿತ್ತು

*ನಾಲ್ಕನೆಯದಾಗಿ, ಅವರು ಫಲಕೊಡುವವರಾಗಬೇಕೆಂದು ಆತನು ಅವರನ್ನು ಆರಿಸಿಕೊಂಡಿದ್ದನು ಎಂದು ನೆನಪು ಮಾಡಿಕೊಳ್ಳಬೇಕಿತ್ತು.* ಯೇಸು ಅವರನ್ನು ತಾನೇ ಆಯ್ದುಕೊಂಡಿದ್ದನು. ಯೇಸು ಅವರಲ್ಲಿ ವಿಶ್ವಾಸವಿಟ್ಟು, ಅವರನ್ನೇ ಅವಲಂಭಿತನಾಗಿದ್ದನು "ನೀವು ನನ್ನನ್ನು ಆರಿಸಿ ತೆಗೆದುಕೊಂಡಿಲ್ಲ, ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡೆನು ನೀವು ಫಲಕೊಡಬೇಕೆಂದು ನೇಮಿಸಿದ್ದೇನೆ ..." (15:16). ಲೋಕದಲ್ಲಿ ಉಳಿಯುವಂಥ ಫಲ ಕೊಡುವವರಾಗಬೇಕಿತ್ತು. ಲೋಕಕ್ಕೆ ಈ ಮನುಷ್ಯರ ಅಗತ್ಯವಿತ್ತು. ಅವರು ಫಲಕೊಡುತ್ತಾ ಲೋಕದಲ್ಲಿ ಕೆಲಸ ಮಾಡಬೇಕೆಂದು ಯೇಸು ಬಯಸಿದ್ದನು. ಯೇಸು ಅವರಿಗೆ ತಂದೆಯೊಂದಿಗೆ ಪ್ರಾರ್ಥನೆ ಮಾಡುವಂಥ ಸಾಮರ್ಥ್ಯವನ್ನು ನೀಡಿದ್ದನು.

## ಆತನ ಹೆಸರಿನಲ್ಲಿ ಪ್ರಾರ್ಥಿಸಬೇಕು

*ಐದನೆಯದಾಗಿ, ಆತನ ಹೆಸರಿನಲ್ಲಿ ತಂದೆಯೊಂದಿಗೆ ಪ್ರಾರ್ಥಿಸಬೇಕು ಎಂದು ಅವರಿಗೆ ನೆನಪು ಮಾಡಿದನು.* ಆತನು ಅವರಿಗೆ, ಹೀಗಿರಲಾಗಿ ನನ್ನ ಹೆಸರಿನಲ್ಲಿ ತಂದೆಯನ್ನು ಏನೇನು ಬೇಡಿಕೊಳ್ಳುವಿರೋ ಅದನ್ನು ಆತನು ನಿಮಗೆ ಕೊಡುವನು (15:16). ಅವರ ಕೊರತೆಗಳನ್ನು ನೀಗಿಸಿಕೊಳ್ಳಲು ಕರ್ತನ ಕೆಲಸ ಮಾಡಲು, ತನ್ನ ಹೆಸರಿನ ಮೂಲಕ ತಂದೆಯೊಂದಿಗೆ ನೇರವಾಗಿ, ಪ್ರಾರ್ಥಿಸುವ ಸಂಪರ್ಕವನ್ನು ಯೇಸು ಅವರಿಗೆ ಕಲ್ಪಿಸಿಕೊಟ್ಟನು.

ಅಪೊಸ್ತಲರು ತಂದೆಯೊಂದಿಗೆ ಪ್ರಾರ್ಥಿಸುವ ಸಾಮರ್ಥ್ಯವನ್ನು ಹೊಂದಿದ್ದರು ಎಂದು ಯೇಸು ಅವರಿಗೆ ತಿಳಿಸಿದನು. ಯೇಸು ಅವರ ವಿಜ್ಞಾಪನೆಗಳನ್ನು ತಂದೆಯ ಸಿಂಹಾಸನಕ್ಕೆ

ರವಾನಿಸುತ್ತಿದ್ದನು.

## ಒಬ್ಬರನ್ನೊಬ್ಬರು ಪ್ರೀತಿಸಿರಿ

*ಆರನೆಯದಾಗಿ, ಅವರು ಪರಸ್ಪರ ಪ್ರೀತಿಸಬೇಕಿತ್ತು.* "ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂತಲೇ ಇವುಗಳನ್ನು ನಿಮಗೆ ಆಜ್ಞಾಪಿಸುತ್ತೇನೆ" ಅಂದನು (15:17). ಈ ಆಜ್ಞೆಯಲ್ಲಿರುವ ಛಲವನ್ನು ಇಲ್ಲಿ ಗಮನಿಸುತ್ತೇವೆ. ಆತನ ಕುಟುಂಬವು ಒಗ್ಗಟ್ಟಾಗಿ ಕಲೆಯುವದು ತೀವ್ರವಾದ ಕಾರ್ಯವಾಗಿತ್ತು. ಅವರು ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರೆ, ಅವರು ಲೋಕದಲ್ಲಿ ಉಂಟಾಗುವ ಸಂಕಷ್ಟದಿಂದ ಪಾರಾಗಿ, ಮಹೋನ್ನತ ಕಾರ್ಯಗಳನ್ನು ಮಾಡುವ ಸಾಧ್ಯತೆಯಿತ್ತು.

ಕರ್ತನು ಅವರಿಗೆ ಆಜ್ಞೆ ಮಾತ್ರ ನೀಡದೆ, ಒಂದು ನಿದರ್ಶನವನ್ನು ಸಹ ನೀಡಿದನು. ಆತನು ಅವರನ್ನು ಪ್ರೀತಿಸಿದ್ದಂತೆ, ಅವರು ಇತರರನ್ನು ಪ್ರೀತಿಸಬೇಕಿತ್ತು. "ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ ಏನೆಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು" (13:34). ಒಬ್ಬರನ್ನೊಬ್ಬರನ್ನು ಯಾವ ರೀತಿ ಪ್ರೀತಿಸಬೇಕೆಂದು ಯೇಸು ಅವರಿಗೆ ಕಲಿಸಿದ್ದನು. ಅವರಲ್ಲಿದ್ದ ಪ್ರೀತಿಯು ಅಲ್ಲಿದ್ದವರ ಮುಂದೆ ಪ್ರಕಟವಾಗಬೇಕಿತ್ತು. ಅವರನ್ನು ಸಂಧಿಸಿದವರಿಗೆ ಆ ಪ್ರೀತಿಯು ಸ್ಪರ್ಷವಾಗ ಬೇಕಿತ್ತು (13:35).

ಕಳವಳ ಉಂಟಾಗುವಾಗ, ನಾವೇನು ಮಾಡಬೇಕು?

- ನಾವು ಸಹ ಪ್ರೀತಿಸಲ್ಪಟ್ಟಿದ್ದೇವೆ ಎಂದು ಅರಿಯಬೇಕು.
- ನಾವು ವಿಧೇಯತೆಯ ಪ್ರಾಮುಖ್ಯತೆಯನ್ನು ಅರಿಯಬೇಕು.
- ನಾವು ಉನ್ನತವಾದ ಕರೆಯನ್ನು ಹೊಂದಿದ್ದೇವೆಂದು ನೆನಪಿಸಿಕೊಳ್ಳಬೇಕು.
- ನಾವು ಕರ್ತನ ಉನ್ನತವಾದ ಕೆಲಸದಲ್ಲಿ ಪಾಲುದಾರರು ಎಂದು ಅರಿಯಬೇಕು.
- ದೇವರು ನಮ್ಮ ಪ್ರಾರ್ಥನೆಗೆ ಉತ್ತರಿಸುವನು ಎಂದು ನಾವು ಅರಿಯಬೇಕು.
- ನಾವು ಆತನ ಕುಟುಂಬದವರಾಗಿರುವದರಿಂದ, ಬರುವಂತಹ ಎಲ್ಲಾ ಸಂಕಷ್ಟಗಳನ್ನು ಎದುರಿಸಬಹುದೆಂದು ನಂಬಬೇಕು.

ಇವು ಯೇಸು ತನ್ನ ಅಪೊಸ್ತಲರಿಗೆ ನೀಡಿದ ದೃಢವಾದ ಹೇಳಿಕೆಗಳಾಗಿವೆ. ಅವರಿಗೆ ಕೊಡುತ್ತಿದ್ದ ಪ್ರೋತ್ಸಾಹದ ಮಾತುಗಳು ಬೇಕಾಗಿವೆ. ಅವರ ಹೃದಯದಲ್ಲಿರುವ ಈ ಮಾತುಗಳೊಂದಿಗೆ, ಅವರು ಯೇಸುವಿನ ಒಲುಮೆಯನ್ನು ಕೈದು ಮಾಡಿದ್ದನ್ನು, ಹೊಡೆತಗಳನ್ನು ಎದುರಿಸಿದರು. ಯೇಸುವಿನ ಉಪದೇಶಗಳನ್ನು ತಮ್ಮ ಮನದಲ್ಲಿಟ್ಟುಕೊಂಡು ಸಮೀಪದಲ್ಲಿರುವ ಹಾಗೂ ಮುಂಬರುವ ಉಪದ್ರವಗಳನ್ನು ಸಹಿಸಿಕೊಂಡರು. ಯೇಸುವಿನ ಹಿಂಬಾಲಕರನ್ನು ಆತನು ಬರುವವರೆಗೆ ಆತನಲ್ಲಿರುವಂತೆ ಈ ಪ್ರೋತ್ಸಾಹದ ಮಾತುಗಳು ಮಾಡಿದವು.

## ಮುಕ್ತಾಯ

ಈ ದೃಢ ವಿಶ್ವಾಸವನ್ನು ಯೇಸು ತನ್ನ ಅಪೊಸ್ತಲರಿಗೆ ನೀಡಿದನು. ಅವರಿಗೆ ಆತನು ನೀಡಿದ ಪ್ರತಿಯೊಂದು ಉತ್ತೇಜನದ ಮಾತುಗಳು ಅವರಿಗೆ ಅಗತ್ಯತೆಯಿತ್ತು. ಈ ಮಾತುಗಳನ್ನು ತಮ್ಮ ಹೃದಯದಲ್ಲಿ ಹೊಂದಿದವರಾಗಿ ಅವರು ವಿಚಾರಣೆಗೆ ಒಳಗಾದರು, ಏಟುಗಳನ್ನು ತಿಂದರು, ಯೇಸುವಿನಂತೆ ಕ್ರೂಜಿತರಾದರು. ಯೇಸುವಿನ ಪ್ರೀತಿಯನ್ನು ದೃಷ್ಟಿಸಬೇಕು, ವಿಧೇಯತೆಗೆ ಸಮರ್ಪಿಸಿ ಕೊಳ್ಳಬೇಕು, ನಮ್ಮ ಉನ್ನತ ಕರೆಯನ್ನು ನೆನಪು ಮಾಡಬೇಕು, ಯೇಸುವಿನ ಕೆಲಸದಲ್ಲಿರುವ ನಮ್ಮ ಪಾಲುದಾರಿಕೆಯನ್ನು ನೆನಪು ಮಾಡಬೇಕು, ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸಬೇಕು, ಪರಸ್ಪರ ಪ್ರೀತಿಸಬೇಕು. ಈ ಕ್ರಿಯಾಶೀಲವಾದ ನಂಬಿಕೆಯಿಂದ ಈ ಪ್ರಪಂಚವನ್ನು ಎದುರಿಸಬಹುದು.

*"ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದು ಬಂದದೆ. ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ. ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವದುಂಟೇ? ಪ್ರಿಯರಾದ ಮಕ್ಕಳೇ, ನಾವು ಬರೀ ಮಾತಿನಿಂದಾಗಲಿ ಬಾಯುಪಚಾರದಿಂದಾಗಲಿ ಪ್ರೀತಿಸುವವರಾಗಿರಬಾರದು; ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಬೇಕು" (1 ಯೋಹಾನ 3:16-20).*